ಮಾಡಿಬಿಡ್ತಾರೆ ಅಂದ್ಕೊಂಡಿದೀಯಾ? ನಿಂಗೆ ಮರುಳು...' ಉಗಿದು ಉಪ್ಪಿನಕಾಯಿ ಹಾಕಿದ್ದಾಳೆ ಮಗಳು. ಹೊಟ್ಟೆಯೊಳಗಿದ್ದಿದ್ದೆಲ್ಲಾ ಹೇಳಿಕೊಳ್ಳುವುದಕ್ಕೆ ಯಶೋದಮ್ಮನಿಗೆ ಅವಳೊಬ್ಬಳೇ ದಿಕ್ಕು. ಅವಳು ಹೀಗೆಲ್ಲಾ ಬೈದರೆ ಅದೇನೋ ಸಮಾಧಾನವೆನಿಸುವುದು ವಿಚಿತ್ರ, ಆದರೂ ನಿಜ. ಫೋನಿನಲ್ಲಿ ಮಾತಾಡಿಕೊಳ್ಳುವಂತಾ ವಿಷಯ ಅಲ್ಲ. ಅಲ್ಲೆಲ್ಲೋ ಮಾತು ಕೇಳಿಸದಷ್ಟು ದೂರ ತಾವು ಮರೆಯಾಗಿ ನಿಂತು ಮಗಳ ಕಿವಿ ಕಚ್ಚುವುದು ಸೊಸೆಗೆ ಅವಮಾನ ಮಾಡಿದಂತೆ ಎಂದು ಯಶೋದಮ್ಮನ ಅನಿಸಿಕೆ. ಅವಳೂ ಅಷ್ಟೇ. ಅಪ್ಪನ ಮನೆಯಿಂದ ಫೋನು ಬಂದರೆ ಎಲ್ಲರೆದುರು ಮಾತಾಡುವಂತಹವಳು. ಮಗಳ ಹತ್ತಿರ ಮನಸ್ಸು ಬಿಚ್ಚಿ ಮಾತಾಡುವುದೇನಿದ್ದರೂ ವರ್ಷಕ್ಕೆ ಒಮ್ಮೆಯೋ, ಎರಡು ಸಲವೋ ಅವಳು ತೌರಿಗೆ ಹಾಜರಿ ಹಾಕಿದಾಗ. ಸೊಸೆ ಸ್ನಾನಕ್ಕೋ, ಮತ್ತೊಂದಕ್ಕೋ ಹೋದಾಗ...

★★★

ಎರಡು ಸೌಟು ಹುಳಿಯನ್ನು ಸಣ್ಣ ಪಾತ್ರೆಗೆ ಹಾಕಿಕೊಂಡು ಬಿಸಿ ಮಾಡಿಕೊಂಡರು ಯಶೋದಮ್ಮ. ಹುಳಿ ರುಚಿಯಾಗಿದ್ದರೂ ಗಂಟಲಲ್ಲಿ ಅನ್ನ ಇಳಿಯಲಿಲ್ಲ. ಮಜ್ಜಿಗೆ ಕಡೆಯುವ ಕೆಲಸ ಇವತ್ತು ಕೈ ಬಿಟ್ಟಿದ್ದರಿಂದ ಚಾಕುವಿನಿಂದ ಕುಯ್ಯುವ ಹಾಗಿತ್ತು ಗಟ್ಟಿ ಮೊಸರು. ತಿಂದು ತೇಗುವಷ್ಟಿದ್ದರೂ ಉಣ್ಣುವ ಬಾಯಿಗೆ ತತ್ವಾರ.

ಯಶೋದಮ್ಮ ಉಂಡ ಶಾಸ್ತ್ರ ಮುಗಿಸಿ ಮೇಲೇಳುವುದಕ್ಕೂ, ಹೊರಗಡೆ ಕೆಂಪ ಕಿವಿ ಹೊಟ್ಟೆ ಹಾರಿ ಹೋಗುವಷ್ಟು ಬೊಗಳತೊಡಗುವುದಕ್ಕೂ ಸಮಸಮ. ಅವನು ಬೊಗಳುವ ರೀತಿಯಲ್ಲೇ ಅಂದಾಜಾಯ್ತು ಯಶೋದಮ್ಮನಿಗೆ, ಯಾರೋ ತಿರುಕರು ಉಣುಗೋಲಿನ ಹತ್ತಿರ ಬಂದಿದ್ದಾರೆ. ಹೆದ್ದಾರಿಯಿಂದ ಎರಡು ಕಿ.ಮೀ. ದೂರದಲ್ಲಿದ್ದರೂ ಹೀಗೆ ಹೊತ್ತಲ್ಲದ ಹೊತ್ತಿನಲ್ಲಿ ತಿರಿಯಲು ಬರುವವರಿಗೆ ಕಮ್ಮಿ ಇಲ್ಲ. ಮೂರೋ, ನಾಲ್ಕೋ ಜನ ಗುಂಪು ಕಟ್ಟಿಕೊಂಡು ಬರುತ್ತಾರೆ. 'ಮೊರದಾಗೆ ನಾಕು ಪಾಲು ಮಾಡ್ಕೊಡು ತಾಯೀ...' ಎನ್ನುತ್ತಾ ಎಷ್ಟು ಜನ ಬಂದಿದ್ದಾರೋ ಅಷ್ಟು ಪ್ರತ್ಯೇಕ ಗುಡ್ಡೆ ಹಾಕಿಸಿಕೊಂಡು ಭಿಕ್ಷೆ. ಹೀಗೆ ಪ್ರತ್ಯೇಕ ಪಾಲಾದರೆ ಹೆಚ್ಚು ಗಿಟ್ಟುತ್ತದೆ ಎನ್ನುವ ಲೆಕ್ಕಾಚಾರ. ತಿರಿಯಲು ಬರುವವರನ್ನು 'ಮುಂದೆ ಹೋಗಿ...' ಎಂದು ಕದ ಮುಚ್ಚಿಕೊಂಡು ಬರಿಗೈಲಿ ಕಳಿಸುವ ಪದ್ಧತಿ ಇಂತಾ ಹಳ್ಳಿಮನೆಗಳಲ್ಲಿ ಕಮ್ಮಿ. ಭತ್ತ ಬೆಳೆಯುವ ಭೂಮಿ ಕಮ್ಮಿಯಾಗುತ್ತಾ, ಕಮ್ಮಿಯಾಗುತ್ತಾ ಆರ್ಥಿಕ ಬೆಳೆಗೆ ದಾರಿ ಮಾಡಿಕೊಟ್ಟಿದ್ದರೂ ಕೊನೇಪಕ್ಷ ಮನೆಗೆ ಬೇಕಾಗುವಷ್ಟು ಭತ್ತವನ್ನು ತಾವೇ ಬೆಳೆದುಕೊಳ್ಳುವ ಕ್ರಮ. ಪಡಸಾಲೆಯ ಕೊನೆಯಲ್ಲಿ ಸಾಲಾಗಿ ಜೋಡಿಸಿಟ್ಟಿರುವ ಅಕ್ಕಿ ಮೂಟೆಗಳು. ಟಿಲ್ಲರಿನಲ್ಲಿ ಸ್ವತಾ ಮಿಲ್ಲಿಗೆ ಹೋಗಿ ಅಕ್ಕಿ ಮಾಡಿಸಿ ತಂದಿಡುತ್ತಾನೆ ಮಗ. ಭಿಕ್ಷುಕರು ಇಂತಲ್ಲಿಗೆ ದಿನಾ ಬರುವುದಿಲ್ಲ. ಅಪರೂಪಕ್ಕೊಮ್ಮೆ ಬರುವವರಿಗೆ ತಾರಮ್ಮಯ್ಯ ಮಾಡುವ ರಿವಾಜಿಲ್ಲ. ಕೈಲಾದ ದಾನ. ಪುಣ್ಯದ ಗಂಟಿಗೆ ಒಂದಿಷ್ಟು ಸೇರ್ಪಡೆ.

ಕೈ ತೊಳೆದು ಸೆರಗಿಗೆ ವರೆಸಿಕೊಳ್ಳುತ್ತಾ ಮುಂಬಾಗಿಲಿಗೆ ಬಂದು ಹಣಿಕಿದರು ಯಶೋದಮ್ಮ. ಅವರು ಅಂದುಕೊಂಡಿದ್ದಂತೆ ತಿರುಕರೇ. ನಡುವಯಸ್ಸಿನ ಗಂಡ, ಹೆಂಡತಿ. 'ಯಾರನ್ನೂ ಅಂಗಳದೊಳಕ್ಕೆ ಬರೋಕೆ ಬಿಡ್ಬೇಡಿ. ತಲೆ ಒಡೆದು ದೋಚ್ಕಂಡ್ಹೋದ್ರೆ ಕೇಳೋರು ದಿಕ್ಕಿಲ್ಲ...' ಮಗನ ಮಾತು ನೆನಪಾಗಿ ಒಂದು ಕ್ಷಣ ಎದೆಬಡಿತ ಏರಿದ್ದು ಹೌದು. 'ಕೂ...' ಹಾಕಿದರೆ ಕೇಳುವಷ್ಟು ದೂರದಲ್ಲಿ ಕೆಲಸದಾಳಿನ ಒಂದು ಬಿಡಾರ ಇದೆ. ಸಂತೆ ಇವತ್ತು. ಗಂಡಹೆಂಡಿರ ಸವಾರಿ ಸಂತೆಗೆ ಹೋಗಿದೆ. ಬಿಡಾರದ ಆಸುಪಾಸಿನಲ್ಲಿ ಒಂದಿಷ್ಟು ತರಕಾರಿ ಬೆಳೆದು, ಅದನ್ನು ವಾರದ ಸಂತೆಯಲ್ಲಿ ಮಾರಿ, ಬರುವ ಕಾಸನ್ನು ಹೆಚ್ಚುವರಿ ಖರ್ಚಿಗೆ ಕೂಡಿಟ್ಟುಕೊಳ್ಳುತ್ತಾರೆ ಗಂಡ, ಹೆಂಡತಿ. ತೀರಾ ಅನಿವಾರ್ಯವಲ್ಲದಿದ್ದರೆ ಮಗ, ಸೊಸೆ ಅವರನ್ನು ಒಂಟಿಯಾಗಿ ಬಿಟ್ಟು ಹೋಗುವುದಿಲ್ಲ. 'ಬೆಳಗ್ಗೆ ಹೋಗಿ ರಾತ್ರಿ ಬರೋಕೆ ಎಂತಾ ಮೀನಾಮೇಷ? ನನ್ನೇನು ಕುರ್ಕ ಹೊತ್ಕಂಡ್ಹೋಗುತ್ತಾ? ಕೆಂಪ